ಪ್ರದರ್ಶನಗಳಲ್ಲಿ ತಪ್ಪದೆ ಪಾಲ್ಗೊಂಡು ಅದರ ಹುಳಿ ಉಪ್ಪುಗಳನ್ನು ಪಾನಿಪುರಿ, ಬೇಲ್‌ಪುರಿ ಮೆಲ್ಲುತ್ತ ಚರ್ಚಿಸುತ್ತಿದ್ದರು.

ಮಧ್ಯಾಹ್ನದ ಊಟಕ್ಕೆ ಹಾಸ್ಟೆಲ್‌ಗೆ ಹೋಗಬೇಕಿದ್ದ ನಟ ಲಲಿತಾಳ ಸಲುವಾಗಿ ಕ್ಯಾಂಟೀನ್‌ಗೆ ಹೋಗುತ್ತಿದ್ದ. ಲಲಿತಾ ಎಂದೂ ನಟನ ಕೈಯಲ್ಲಿ ಬಿಲ್ ಕೊಡಿಸುತ್ತಿರಲಿಲ್ಲ. ಹಾಸ್ಟೆಲ್ ಬ್ರಾಂಡ್ ಕುಷ್ಕವನ್ನು ಆಸೆಪಟ್ಟು ಒಮ್ಮೆ ನಟನಿಂದ ತರಿಸಿಕೊಂಡು ತಿಂದು ಮಾರುಹೋಗಿದ್ದಳು. ಕುಷ್ಕ ಮಾಡಿದಾಗಲೆಲ್ಲ ಲಲಿತಾಳಿಗಾಗಿ ಒಂದು ಬಾಕ್ಸ್ ಕಾಲೇಜಿಗೆ ಬರುತ್ತಿತ್ತು. ಅವಾರ್ಡ್ ವಿನ್ನಿಂಗ್ ಪಿಕ್ಚರ್ ಅದು ಇದು ಎಂದು ಯೂನಿವರ್ಸಿಟಿಯ ಇತರೆ ಹುಡುಗರು ಬಸ್ ಹತ್ತಿಕೊಂಡು ಹೋದರೆ, ನಟ ಮತ್ತು ಲಲಿತಾ ಸ್ಕೂಟಿಯಲ್ಲಿ ಥಿಯೇಟರ್ ತಲುಪುತ್ತಿದ್ದರು. ಹೀಗೆ, ನಟ ಮತ್ತು ಲಲಿತಾಳ ಸ್ನೇಹದ ಹೆಜ್ಜೆಗಳು ಎಲ್ಲೆಂದರಲ್ಲಿ ಕಾಣಲು ಶುರುವಾದವು. ಇದನ್ನ ಇತರ ಹುಡುಗರು ಗುಮಾನಿಯಿಂದ ನೋಡುವುದನ್ನೇನು ಬಿಟ್ಟಿರಲಿಲ್ಲ.

ನಟ ಒಮ್ಮೆ ಆಕೆಯ ಸ್ಕೂಟಿ ತೆಗೆದುಕೊಂಡು ಹಾಸ್ಟೆಲ್ ಹತ್ತಿರ ಯಾವುದೋ ನೋಟ್ಸ್ ಹುಡುಕಿಕೊಂಡು ಬಂದಿದ್ದ. ನಟನ ಸೀನಿಯರ್ ಒಬ್ಬ ಯಾರದಮ್ಮ ಸ್ಕೂಟಿ ಎಂದ. ನಟ ನನ್ನ ಫ್ರೆಂಡ್ ಲಲಿತಾಳದ್ದು ಅಂದಾಗ ಆತ, ‘ಹುಷಾರು ಕಣಮ್ಮ, ಅವರ ಅಣ್ಣ ಜಯಂತ ದೊಡ್ಡ ವಕೀಲ. ಯಾವಾಗಲೂ ರಾಜಕಾರಣಿಗಳ ಜೊತೆ ಇರ್ತಾನೆ’ ಅಂದ. ವಕೀಲ ಜಯಂತ ನಟನಿಗೆ ಈಗಾಗಲೇ ಪರಿಚಯವಿದ್ದ ಪ್ರಸಿದ್ಧನೆ. ಆದರೆ, ಅವನ ತಂಗಿಯೇ ಈ ಲಲಿತಾ ಎಂಬುದು ಮಾತ್ರ ಹೊಸ ವಿಷಯವಾಗಿತ್ತು. ಲಲಿತಾಳ ಈ ಮಟ್ಟಿಗಿನ ಪರಿಚಯಕ್ಕೂ ಮುನ್ನವೆ ನಟ ಅವಳ ಫೇಸ್‌ಬುಕ್ ಪ್ರೊಫೈಲ್ ಅನ್ನು ಕುತೂಹಲಕ್ಕೆ ಪರಿಶೀಲಿಸಿದ್ದ. ಒಮ್ಮೆ ಮಾತ್ರ ಆಕೆ ಇದೇ ಜಯಂತನ ಜೊತೆಯಿರುವ ಫೋಟೊ ಒಂದನ್ನು ಹಂಚಿಕೊಂಡು ನನ್ನ ಚಳವಳಿಯ ಮಾರ್ಗದರ್ಶಕನೂ ಪ್ರೀತಿಯ ಅಣ್ಣನೂ ಆದ ಜಯಂತನಿಗೆ ಹ್ಯಾಪಿ ಬರ್ತಡೆ ಎಂದಿದ್ದಳು. ಇದನ್ನು ನೋಡಿ ನಟನಿಗೆ ಡೌಟ್ ಹೊಡೆಯಿತಾದರೂ ಜಯಂತನ ವಾಲ್‌ನಲ್ಲಿ ಅನೇಕ ಹುಡುಗ ಹುಡುಗಿಯರು ಇಂಥದ್ದೇ ಶುಭಾಶಯಗಳನ್ನು ಕೋರಿದ್ದರು. ಇದೂ ಹಾಗೇ ಇರಬೇಕೆಂದುಕೊಂಡಿದ್ದ ನಟನಿಗೆ ಗೆಳೆಯ ಹೇಳಿದಾಗಲೇ ತಿಳಿದದ್ದು ತಾನು ತಿರುಗಾಡುತ್ತಿರುವುದು ಪ್ರಸಿದ್ಧ ವಕೀಲ ಜಯಂತನ ಸ್ವಂತ ತಂಗಿಯೊಂದಿಗೆ ಎಂದು.

ನಟ ಈಗಾಗಲೇ ಯಾವ ಸಮಪಾಲು ಚಳವಳಿಯಲ್ಲಿ ಗುರುತಿಸಿಕೊಂಡಿದ್ದನೋ ಅದರ ವಿರೋಧಿ ಗುಂಪಿನಲ್ಲಿದ್ದವನು ಜಯಂತ. ಮೀಸಲಾತಿ ಬೇಕು, ಆದರೆ ಅದು ಸಮಷ್ಠಿಯಾಗಿರಬೇಕು, ಹೀಗೆ ಉಪ ಪಂಗಡಗಳ ಮೀಸಲಾತಿ ಕೇಳುವುದು ಅವೈಜ್ಞಾನಿಕ, ಇದಕ್ಕೆ ಸಂವಿಧಾನದಲ್ಲಿ ಅವಕಾಶವಿಲ್ಲ. ಇದು ನಮ್ಮ ಐಕ್ಯತೆಯನ್ನು ಒಡೆಯುವ ಮೇಲ್ಜಾತಿಗಳ ಪಿತೂರಿ ಎಂದು ವಾದಿಸುತ್ತಿದ್ದಾತ. ಯಾವ ಸಮಪಾಲು ಚಳವಳಿಯವರು ಬೀದಿ ಹೋರಾಟದ ಮೂಲಕ ನ್ಯಾಯಕ್ಕಾಗಿ ಆಗಿಂದಾಗ್ಗೆ ಆಗ್ರಹಿಸುತ್ತಿದ್ದರೋ ಆ ದಿನಗಳಲ್ಲಿ ಈತ ತನ್ನ ಜಾತಿಯ ಎಂ.ಎಲ್.ಎ.ಗಳನ್ನೆಲ್ಲ ಕೂಡಿಕೊಂಡು ಸಂಬಂಧಿಸಿದ ಮಂತ್ರಿ ಮಹೋದಯರಿಗೆ ಇದಾಗಕೂಡದು ಎಂಬ ಅಹವಾಲನ್ನು ಸಲ್ಲಿಸುವುದರಲ್ಲಿ ಮುಂಚೂಣಿಯಲ್ಲಿದ್ದ. ವಕೀಲನೂ ಬುದ್ಧಿವಂತನೂ ಆಗಿದ್ದ ಜಯಂತನ ಮಾತನ್ನ ಅದೇ ಜಾತಿಯ ಜನಪ್ರತಿನಿಧಿಗಳು ಒಪ್ಪುತ್ತಿದ್ದರು. ಹಾಗಾಗಿ, ಜಯಂತ ರಾಜ್ಯದ ಮಟ್ಟಿಗೆ ಆ ಜನಾಂಗಗಳ ಒಕ್ಕೂಟದ ಶಕ್ತಿಯೂ ಆಗಿದ್ದ.

ಈ ಕಾರಣಕ್ಕಾಗಿ ಜಯಂತನನ್ನು, ಆತನ ಸಿದ್ಧಾಂತವನ್ನು ಗೆಳೆಯರೊಂದಿಗೆ ಸೇರಿ ನಟ ಕಟು ಟೀಕೆಗೆ ಗುರಿಪಡಿಸುತ್ತಿದ್ದ. ಆತನನ್ನು ಕುರಿತು ಸಣ್ಣ ಭಾಷೆ ಬಳಸಿ ನಿಂದಿಸಿದ್ದೂ ಇದೆ. ಆದರೆ, ಅದೇ ಜಯಂತನ ಒಡಹುಟ್ಟಿದವಳ ಜೊತೆಗೆ ನಟನ ಸ್ನೇಹ ಬೆಳೆದು, ಇನ್ನೇನು ಪ್ರೇಮಕ್ಕೆ ತಿರುಗುವ ಸೂಚನೆಗಳು ಇಬ್ಬರಿಗೂ ಸಿಗುತ್ತಿರುವ ಹೊತ್ತಿದು!